## ಎನಿದೇನಿದೇನು ನಾಗಲೋಕದ ಮೋಹ...

‘ನಾಗರ ಹಾವೇ ಹಾವೊಳು ಹೂವೆ/ ಬಾಗಿಲ ಬಿಲದಲಿ ನಿನ್ನಯ ಠಾವೆ’ ಎಂದು ಪಂಜೆ ಮಂಗೇಶರಾಯರು ಪದ್ಯ ಬರೆದರು. ‘ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು/ ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ’ ಎಂದು ಬಸವಣ್ಣ ಹೇಳಿದರು. ‘ನಾಗರ ಪಂಚಮಿ ನಾಡಿಗೆ ದೊಡ್ಡದು, ನಾರಿಯರೆಲ್ಲ ನಲಿದಾರು’ ಎಂದು ಜನಪದರು ಹಾಡಿದರು. ಟೀವಿ ಲೋಕದಲ್ಲಿ ಇವೆಲ್ಲವೂ ಮರೆಯಾಗಿ ನಾಗಿಣಿ, ನಾಗಕನ್ನಿಕೆಯರ ಫ್ಯಾಂಟಸಿ ಮೆರೆಯುತ್ತಿದೆ. ನಾವು ಎಲ್ಲೂ ಓದಿಲ್ಲದ, ಕಾಣದ ನಾಗಿಣಿಯರ ನಾಗಲೋಕ, ನಾಗಿಣಿಯರ ದ್ವೇಷ, ಅಸೂಯೆ, ಸೇಡು ತೀರಿಸಿಕೊಳ್ಳುವ ರೋಷ ರಾರಾಜಿಸುತ್ತಿದೆ.

—ವೀಣಾ ಶಂಕರ್, ಬೆಂಗಳೂರು

## ಸಮಾಜಮುಖಿ ‘ಭಗವಂತ’



ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ ಧಾರಾವಾಹಿಯಲ್ಲಿ ಒಂದರ ಬಳಿಕ ಒಂದರಂತೆ ನೀತಿ ಪಾಠ ಹಾಗೂ ಸಮಾಜಮುಖಿ ಮಾಹಿತಿಯನ್ನು ಭಗವಂತನ ಮೂಲಕ ಹೇಳಿಸಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ.

ನಾಗರ ಪಂಚಮಿ ಪ್ರಯುಕ್ತ ಮನೆಯೊಳಗೆ ಮೆಲ್ಲನೆ ಹಾವು ಬಿಟ್ಟು ಆನಂತರ ಆ ಹಾವು ಹಿಡಿಯಲು ಹಣ ಕೀಳುವ ವಂಚಕರ ಬಗ್ಗೆಯೂ ತೋರಿಸಿದ್ದಾರೆ. ಆದರೆ, ಭಗವಂತ ಹಾವು ರಕ್ಷಕರ ರೂಪದಲ್ಲಿ ಆಗಮಿಸಿ ಮನೆಯವರನ್ನೂ ರಕ್ಷಿಸಿ – ಹಾವಿನ ಬಗ್ಗೆ, ಹಾವು ಕಚ್ಚಿದರೆ ಕೂಡಲೇ ಆಸ್ಪತ್ರೆಗೆ ಹೋಗಬೇಕು ಎಂದು ಮಾಹಿತಿ ನೀಡುತ್ತಾನೆ. ಅದಕ್ಕೂ ಮುನ್ನ ಜಾಗ್ರತೆಯನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವ ಸಂದೇಶವನ್ನು ಇಲ್ಲಿ ನೀಡಿದ್ದಾರೆ. ಮೌಢ್ಯ ನಿವಾರಿಸಬೇಕೆಂದೂ, ಒಳ್ಳೆಯತನಕ್ಕೆ ಜಯವಿದೆಯೆಂದೂ ಕೆಲವು ಕಂತುಗಳಲ್ಲಿ ತಿಳಿಸಿದ್ದಾರೆ. ಮಹಿಳೆಯರನ್ನು ಖಳನಾಯಕಿಯರಾಗಿ ತೋರಿಸುವ ಇತರ ಧಾರಾವಾಹಿಗಳಿಗಿಂತ ಇದು ಭಿನ್ನವಾಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ‘ಥಟ್’ಗೆ ಬೇಕಿದೆ ಬದಲಾವಣೆಯ ಸ್ಪರ್ಶ

ಚಂದನ ವಾಹಿನಿಯ ಡಾ. ನಾ. ಸೋಮೇಶ್ವರ ಅವರು ನಿರೂಪಿಸುತ್ತಿರುವ ‘ಥಟ್ ಅಂತ ಹೇಳಿ’ ಇತ್ತೀಚೆಗೆ ಏಕತಾನತೆಯಿಂದ ನಲುಗುತ್ತಿದೆ. ಹಲವು ಸ್ಪರ್ಧಿಗಳು ಉತ್ತರ ಗೊತ್ತಿರದಿದ್ದರೂ ಏನೋ ಊಹೆ ಮಾಡುತ್ತಾ ತಾವೇ ಮೊದಲಿಗರಾಗಬೇಕೆಂಬ ಹಟದಿಂದ ಆಯ್ಕೆಗಳು ಬರುವ ಮೊದಲೇ ಬಝರ್ ಒತ್ತಿ ತಪ್ಪು ಉತ್ತರ ಹೇಳುವುದನ್ನು ನೋಡಿ ಕನಿಕರವಾಗುತ್ತದೆ.

ಉತ್ತರ ಗೊತ್ತಿಲ್ಲದೆಯೂ ಬಝರ್ ಒತ್ತುವುದರಿಂದ ಉಳಿದವರಿಗೆ ಅನ್ಯಾಯವಾಗುತ್ತಿದೆ. ಹೀಗೆ ಬೇಗ ಬೇಗ ಬಝರ್ ಒತ್ತಿ ಎರಡು ಅಥವಾ ಮೂರು ಸಲ ತಪ್ಪು ಉತ್ತರ ಹೇಳುವವರಿಗೆ ಮುಂದಿನ ಎರಡು ಪ್ರಶ್ನೆಗಳಿಗೆ ಮೊದಲು ಉತ್ತರ ಹೇಳಲು ಅವಕಾಶ ನಿರ್ಬಂಧಿಸಿ ಕಾರ್ಯಕ್ರಮವನ್ನು ಇನ್ನಷ್ಟು ಆಸಕ್ತಿಕರವಾಗಿ ಮಾಡಬಹುದು. ಹಾಗೆಯೇ ಯಾವುದಾದರೂ ಕೆಲವು ಹಾಡುಗಳ ಧ್ವನಿಮುದ್ರಿಕೆಗಳನ್ನು ಕೇಳಿಸಿ ಗೀತರಚನೆಕಾರ ಯಾರೆಂದು ಕೇಳುವುದು, ಪ್ರವಾಸಿ ತಾಣಗಳ ಚಿತ್ರ ತೋರಿಸಿ ಸ್ಥಳವನ್ನು ಗುರುತಿಸುವುದು, ಹೀಗೆ ವಿಭಿನ್ನ ಪ್ರಯೋಗಗಳನ್ನು ಮಾಡುವುದು ಉತ್ತಮ. ವೀಕ್ಷಕರೂ ಭಾಗವಹಿಸಲು ಪ್ರಶ್ನೆಗಳನ್ನು ಮೀಸಲಿಡಬಹುದು. ಹಿಂದಿಯ ‘ಕೌನ್ ಬನೇಗಾ ಕರೋಡ್ ಪತಿ’ಯಂತೆ ನಮ್ಮ ಈ ಹೆಮ್ಮೆಯ ಕಾರ್ಯಕ್ರಮವನ್ನು ಇನ್ನಷ್ಟು ಉತ್ತಮಗೊಳಿಸಬಹುದು.

—ಬಿ.ಎನ್. ಭರತ್, ಬೆಂಗಳೂರು

## ಮರು ಪ್ರಸಾರ ನಿಲ್ಲಲಿ

ಚಂದನವಾಹಿನಿಯ ‘ಥಟ್ ಅಂತ ಹೇಳಿ’ ಕಾರ್ಯಕ್ರಮವನ್ನು ಅತ್ಯಂತ ಉತ್ಸಾಹದಿಂದ ಇಷ್ಟಪಟ್ಟು ನೋಡುತ್ತೇನೆ. ವಾರಾಂತ್ಯವನ್ನು ಹೊರತುಪಡಿಸಿ ನಿತ್ಯವೂ ರಾತ್ರಿ 9.30ಕ್ಕೆ ಪೆನ್ನು ಮತ್ತು ಬಿಳಿಹಾಳೆಯನ್ನು ಹಿಡಿದುಕೊಂಡು ಟೀವಿ ಮುಂದೆ ಹಾಜರಾಗುತ್ತೇನೆ. ಹೀಗೆ ನೋಡುವಾಗ ಹಳೆಯ ಕಾರ್ಯಕ್ರಮವನ್ನು ಪ್ರಸಾರ ಮಾಡಿದರೆ ಹೇಗಾಗಬೇಡ? ಇತ್ತೀಚೆಗೆ ಹಾಗೆಯೇ ಆಯಿತು. ಪುನರಾವರ್ತನೆ ನಿಲ್ಲಲೇಬೇಕು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

ವಾರದ ಪತ್ರ

## ಆಹಾ, ಕುಡಿತದ ಮಹಿಮೆಯೇ!

ಕಲರ್ಸ್ ಕನ್ನಡ ವಾಹಿನಿಯ ‘ಅಂತರಪಟ’ ಧಾರಾವಾಹಿಯಲ್ಲಿನ ದೃಶ್ಯವೊಂದು ಹೀಗಿತ್ತು. ಅದೊಂದು ಮದುವೆಯ ಸಮಾರಂಭ. ವರ ಮಹಾಶಯ ಭಾರೀ ಕುಡುಕ. ಮುಹೂರ್ತ ಸಮೀಪಿಸಿದರೂ ಅವನ ನಿಶೆ ಇಳಿದಿಲ್ಲ. ನಿಶ್ಶಕ್ತಿಯಿಂದ ಮಲಗಿರುತ್ತಾನೆ. ಅವನ ಕಡೆಯ ಸಂಬಂಧಿಕರೆಲ್ಲ ನಾನಾ ರೀತಿ ಪ್ರಯತ್ನಿಸಿದರೂ ವಿಫಲರಾಗುತ್ತಾರೆ. ಕೊನೆಗೆ ಅವನ ಸೋದರಮಾವ ಒಂದು ಮದ್ಯವನ್ನು ಅವನ ಬಾಯಿಗೆ ಸುರಿಯುತ್ತಾನೆ. ಏನಾಶ್ಚರ್ಯ! ವರ ಧಿಗ್ಗನೆ ಎದ್ದು ನಿಂತು ರಣಧೀರ ಕಂಠೀರವನಂತೆ ‘ನಾನ್ ರೆಡಿ, ಎಲ್ಲಿ ಹುಡುಗಿ?’ ಎಂದು ಉದ್ಗರಿಸುತ್ತಾನೆ. ಈ ದೃಶ್ಯ ನಮಗೆ ಏನನ್ನು ಹೇಳುತ್ತದೆ?

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಜೀವನದ ಮೌಲ್ಯಗಳನ್ನು ಸರಳವಾಗಿ, ಪರಿಣಾಮಕಾರಿಯಾಗಿ ನಿರೂಪಿಸಲಾಗುತ್ತಿದೆ. ಇಂದಿನ ಸಮಾಜಕ್ಕೆ ಆದರ್ಶ, ನೀತಿಯ ಅವಶ್ಯಕತೆ ಹಿಂದೆಂದಿಗಿಂತ ಹೆಚ್ಚಿದೆ. ಆ ನಿಟ್ಟಿನಲ್ಲಿ ಧಾರಾವಾಹಿಯ ಪ್ರಯತ್ನ ಶ್ಲಾಘನೀಯ. ದೇವರು–ಮಾನವನ ನಡುವಿನ ಸಂಭಾಷಣೆಯ ಮೂಲಕ ತಪ್ಪು–ಸರಿ, ಒಳಿತು–ಕೆಡುಕುಗಳ ವಿಶ್ಲೇಷಣೆ ಮಾಡುವುದು ಆಸಕ್ತಿದಾಯಕ. ಒಂದೇ ಸೂತ್ರವನ್ನು ಹಿಡಿದು ಓಡುವ ಹತ್ತಾರು ಧಾರಾವಾಹಿಗಳ ನಡುವೆ, ಇದು ಅಪರೂಪದ್ದಾಗಿದೆ.

—ಸ್ನೇಹಾ, ಬೆಂಗಳೂರು

## ದುರಂತ ಅಂತ್ಯವಾದರೂ ಆಗಲಿ...

ಕಲರ್ಸ್ ಕನ್ನಡದ ‘ಗೀತಾ’ ಧಾರಾವಾಹಿಯನ್ನು ಮೂರು ವರ್ಷಗಳಿಂದ ನೋಡುತ್ತಿದ್ದೇನೆ. ನ್ಯಾಯಯುತವಾಗಿ ಬಾಳುವ ನಾಯಕ–ನಾಯಕಿ ಪಾತ್ರಗಳ ಸುತ್ತ ಕೊಲೆಯ ಸಂಚು ನೋಡುವುದು ಮನಸಿಗೆ ತುಂಬ ಬೇಸರ ಅನ್ನಿಸುತ್ತದೆ. ಕಥೆಯನ್ನು ಮುಗಿಸಲು ಇಷ್ಟ ಇಲ್ಲದಿದ್ದರೆ ಖಳ ನಾಯಕ ಪಾತ್ರಗಳಾದ ಭಾನುಮತಿ, ಸಿತಾರ ಪಾತ್ರಗಳನ್ನೇ ವಿಜೃಂಭಿಸಿ ದುಃಖಾಂತ್ಯಗೊಳಿಸಿದರೂ ಆಗುತ್ತದೆ. ಇದನ್ನು ಅಂತ್ಯಗೊಳಿಸಿದರೆ ಬೇರೆ ಯಾವುದಾದರೂ ಅರ್ಥಪೂರ್ಣ ಕಾರ್ಯಕ್ರಮವನ್ನು ಇದೇ ಸಮಯದಲ್ಲಿ ರೂಪಿಸಬಹುದು.

—ವಾಸುದೇವ, ಹಾಸನ

## ಅಪೂರ್ವ ಸಂಗಮ

ಕಲರ್ಸ್ ಸಿನಿ ವಾಹಿನಿಯಲ್ಲಿ ಡಾ.ರಾಜ್ ಮತ್ತು ಶಂಕರ್ ನಾಗ್ ಅಭಿನಯದ ‘ಅಪೂರ್ವ ಸಂಗಮ’ ಪ್ರಸಾರ ಮಾಡಿದ್ದಕ್ಕೆ ಅಭಿನಂದನೆ. ಬಹುದಿನಗಳ ನಂತರ ಅಪರೂಪದ ಸಿನಿಮಾ ನೋಡುವುದಕ್ಕೂ ಖುಷಿ. ಅದೇ ರೀತಿ ‘ನಾ ನಿನ್ನ ಮರೆಯಲಾರೆ’, ‘ಬಯಲು ದಾರಿ’, ‘ಗಂಧದ ಗುಡಿ’ ಸಿನಿಮಾಗಳನ್ನೂ ಪ್ರಸಾರ ಮಾಡಲಿ.

‘ದೂರದ ಬೆಟ್ಟ’, ‘ಹಣ್ಣೆಲೆ ಚಿಗುರಿದಾಗ’, ‘ಗೆಜ್ಜೆ ಪೂಜೆ’, ‘ಪರಸಂಗದ ಗೆಂಡೆ ತಿಮ್ಮ’, ‘ಸಂಧ್ಯಾರಾಗ’ ಮೊದಲಾದ ಪ್ರಶಸ್ತಿ ಪಡೆದ ಚಿತ್ರಗಳನ್ನು ಪ್ರಸಾರ ಮಾಡಿದರೆ ಕನ್ನಡ ಚಿತ್ರವಾಹಿನಿಗಳಿಗೂ ಒಂದು ಅರ್ಥ ಬರುತ್ತದೆ. ಹಾಕಿದ್ದನ್ನೇ ಹಾಕುವ ಪರಿಪಾಟವೂ ಅಂತ್ಯವಾಗುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು